# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ :- 12/11/2020 ರಂದು ವಾರ್ಡ್-48ರ ನೋಡಲ್ ಅಧಿಕಾರಿರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿ

**ಸಭೆಗೆ ಹಾಜರಿದ್ದ ಅಧಿಕಾರಿಗಳು :-**

1. ಶ್ರೀ. ಪ್ರೇಮಾನಂದ ಕುಮಾರ್, ನೋಡಲ್ ಅಧಿಕಾರಿ.
2. ಶ್ರೀ. ಹೃದಯ ಪಾಟಿಲ್, ಇಂಜಿನೀಯರ್.
3. ಶ್ರೀ. ವೆಂಕಟೇಶ್, ಹಿರಿಯ ಆರೋಗ್ಯ ಪರೀವಿಕ್ಷಕರು.
4. ಶ್ರೀ. ಕೋದಂಡ ರಾಮ, ಎಲೆಕ್ಟ್ರಿಕ್ರಲ್ ಇಂಜಿನೀಯರ್ ಬೆಸ್ಕಾಮಂ.
5. ಶ್ರೀ. ಮುರಳಿ ಕಂದಾಯ ಪರೀವಿಕ್ಷಕರು.
6. ಬಸವರಾಜು ವಾರ್ಡ್ ಇಂಜಿನಿಯರ್.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯ ಕಾರ್ಯದರ್ಶಿರವರು ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿದರು. ವಾರ್ಡ್ ಸಮಿತಿ ಸಭೆಯನ್ನು ಕಂದಾಯ ಕಛೇರಿಯಲ್ಲಿ ನಡೆಸಲಾಯಿತು. ನೋಡಲ್ ಅಧಿಕಾರಿ ರವರು ವಾರ್ಡ್‌ನ ಸಾರ್ವಜನಿಕರ ಕುಂದು ಕೋರತೆಗಳು ಸಮಿತಿ ಸಭೆಯ ಸದಸ್ಯರವರೊಂದಿಗೆ ಹಾಗೂ ಅಧಿಕಾರಿಗಳ ಜೊತೆಯಲ್ಲಿ ಚರ್ಚಿಸಿದರು ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳವ ಬಗ್ಗೆ ಸಂಬಂದಪಟ್ಟ ಅಧಿಕಾರಿ ಹಾಗೂ ನೌಕರರುಗಳಿಗೆ ಈ ಕೆಳಕಂಡಂತೆ ತಿಳಿಸಲಾಗಿರುತ್ತದೆ.

➢ **ಕಾಮಗಾರಿ ಇಲಾಖೆಗೆ ಸಂಬಂಧಿಸಿರುವುದು**

1. ವಾರ್ಡ್ ವ್ಯಾಪ್ತಿಯ ಶಿವಾಜಿ ರಸ್ತೆ, ಅಮರ್ ಸ್ಕೂಲ್ ರಸ್ತೆ ಮತ್ತು ಅಜ್ಜು ಫಲ್ಲಿ ರಸ್ತೆಗಳನ್ನು ನವೀಕರಣಗೊಳಿಸಲು ಸೂಚಿಸಿದರು.
2. ವಾರ್ಡ್ ವ್ಯಾಪ್ತಿಯ ಮುನಿಬೈರಪ್ಪ ಬ್ಲಾಕ್ ಸಿಪಾಯಿ ರಸ್ತೆ ಡಾಂಬರಿಕರಣ ಶಿಘ್ರದಲ್ಲೆ ಪೂರ್ಣಗೊಳಿಸಲು ಸೂಚಿಸಿದರು.
3. ವಾರ್ಡ್ ವ್ಯಾಪ್ತಿಯ ಡಿ.ಜೆ.ಹಳ್ಳಿ ಮಾರ್ಕೆಟ್ ಫೂಟ್ಪಾತ್‌ಗಳನ್ನು ಒತ್ತುವರಿ ಮಾಡಿಕೊಂಡು ವ್ಯಾಪಾರ ಮಾಡುವವರನ್ನು ಕೂಡಲೆ ತೇರೆವುಗೋಳಿಸಲು ಸೂಚಿಸಿದರು.
4. ವಾರ್ಡ್ ವ್ಯಾಪ್ತಿಯಲ್ಲಿ ಸಿ.ಸಿ ಕ್ಯಾಮೇರಗಳು ಕಾರ್ಯನಿರ್ವಹಿಸುತ್ತಿಲ್ಲ ಕೂಡಲೆ ಕ್ರಮ ಕೈಗೋಳ್ಳಲು ಸೂಚಿಸಿದರು.

Scanned with CamScanner

ಕ್ರಮ : ಸಹಾಯಕ ಅಭಿಯಂತರರುಈ ಮೇಲೆ ಸೂಚಿಸಿರುವ ಸಮಸ್ಯೆಗಳಿಗೆ ಶೀಘ್ರದಲ್ಲೆ ಕ್ರಮ ವಹಿಸುತ್ತೇನೆ ಹಾಗೂ ರಸ್ತೆ ನವೀಕರಣಗಳ ಕಾಮಗಾರಿಯನ್ನು ಟೆಂಡರ್ ಪ್ರಕ್ರಿಯೆ ನಂತರ ಪ್ರಾರಂಭ ಮಾಡಲಾಗುವುದು ಎಂದು ಪ್ರತಿಕ್ರಿಯೆ ನೀಡಿದರು.

➢ **<u>ಕಂದಾಯ ಇಲಾಖೆಗೆ ಸಂಬಂದಿಸಿರುವುದು</u>**

1. ವಾರ್ಡ್ ವ್ಯಾಪ್ತಿಯಲ್ಲಿ ಕಂದಾಯ ವಸೂಲಾತಿಯ ಬಗ್ಗೆ ಚರ್ಚಿಸಲಾಗಿ ಸಂಬಂದ ಪಟ್ಟ ಕಂದಾಯ ಅಧಿಕಾರಿಗಳಿಗೆ ಹೆಚ್ಚಿನ ರೀತಿಯ ಕಂದಾಯ ವಸೂಲಾತಿ ಮಾಡಲು ಸೂಚಿಸಿದರು.

➢ **<u>ಆರೋಗ್ಯ ಇಲಾಖೆಗೆ ಸಂಬಂದಿಸಿರುವುದು</u>**

1. ವಾರ್ಡ್ ವ್ಯಾಪ್ತಿಯ ಡಿ.ಜೆ.ಹಳ್ಳಿ ಮಾರ್ಕೆಟ್‌ನಲ್ಲಿ ಮಾಂಸಾಹರವನ್ನು ಮಾರುವ ಅಂಗಡಿಗಳು ಪ್ರಾಣಿಗಳ ತ್ಯಾಜ್ಯವನ್ನು ಕಸದ ಬ್ಲಾಕ್ ಸ್ಪಾಟ್‌ಗಳಲ್ಲಿ ವಿಲೇವಾರು ಮಾಡುತ್ತಿದ್ದು ಅತಂಹ ಅಂಗಡಿಗಳ ಪರವಾನಗಿ ರದ್ದುಗೊಳಿಸಲು ಸೂಚಿಸಿದರು.

ಕ್ರಮ : ಹಿರಿಯ ಆರೋಗ್ಯ ಪರೀವಿಕ್ಷಕರು ಈ ಮೇಲೆ ಸೂಚಿಸಿರುವ ಸಮಸ್ಯೆಗಳಿಗೆ ಶೀಘ್ರದಲ್ಲೆ ಕ್ರಮ ವಹಿಸುತ್ತೇನೆ ಎಂದು ಪ್ರತಿಕ್ರಿಯೆ ನೀಡಿದರು.

➢ **<u>ಬಿ.ಡಬ್ಲೂ.ಎಸ್.ಎಸ್.ಬಿ ಇಲಾಖೆಗೆ ಸಂಬಂಧಿಸಿರುವುದು</u>**

1. ವಾರ್ಡ್ ವ್ಯಾಪ್ತಿಯಲ್ಲಿ ನೀರಿನ ಅಭಾವ ಹೆಚ್ಚಾಗಿದ್ದು ಕೂಡಲೆ ಕ್ರಮ ವಹಿಸಲು ಸೂಚಿಸಿದರು.
2. ವಾರ್ಡ್ ವ್ಯಾಪ್ತಿಯಲ್ಲಿ ನಿಗದಿತ ದಿನ ಮತ್ತು ಸಮಯದಂದು ನೀರನ್ನು ಪೂರೈಕೆಯಾಗುತ್ತಿಲ್ಲ ಕೂಡಲೆ ಕ್ರಮ ವಹಿಸಲು ಸೂಚಿಸಿದರು.
3. ವಾರ್ಡ್ ವ್ಯಾಪ್ತಿಯಲ್ಲಿ ಸ್ಯಾನಿಟರಿ ಲೇನ್ ಬ್ಲಾಕ್ ಆಗುವುದು ಕಂಡುಬಂದಿದ್ದು ಇದರಿಂದಾಗಿ ಈ ವಾರ್ಡ್‌ಗೆ ಕಡ್ಡಾಯವಾಗಿ ಸ್ಯಾನಿಟರಿ ವಾಹನವನ್ನು ನಿಯೋಜಿಸಲು ಕೇಳಿಕೊಂಡರು.
4. ವಾರ್ಡ್ ವ್ಯಾಪ್ತಿಯ ಡಿ.ಜೆ.ಹಳ್ಳಿ ಮಾರ್ಕೆಟ್ ಹತ್ತಿರ ಕುಡಿಯುವ ನೀರು ಪೈಪ್ ಹೊಡೆದು ಹೋಗಿ ಮೋರಿಗೆ ಹೊಗುತ್ತಿದ್ದು ಕೂಡಲೆ ಸರಿಪಡಿಸಿ ನೀರು ಪೌಲಾಗುವುದನ್ನು ತಡೆಯಲು ಸೂಚಿಸಿದರು.
5. ವಾರ್ಡ್ ವ್ಯಾಪ್ತಿಯಲ್ಲಿ ಕೊಳವೆ ಬಾವಿಗಳನ್ನು ರಿಪೇರಿ ಮಾಡಿ ಸಾರ್ವಜನಿಕರಿಗೆ ನೀರು ವಿತರಿಸಲು ವ್ಯವಸ್ತೆ ಮಾಡುವಂತೆ ಸೂಚಿಸಿದರು.

ಕ್ರಮ : ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲೂ.ಎಸ್.ಎಸ್.ಬಿ)ರವರಿಗೆ ಈ ಮೇಲೆ ಸೂಚಿಸಿರುವ ಎಲ್ಲಾ ಸಮಸ್ಯಗಳಿಗೆ ಸೂಕ್ತ ಕ್ರಮ ವಹಿಸಲು ಈ ಸಭೆ ಮುಖಾಂತರ ಸೂಚಿಸಿದರು.

Scanned with CamScanner

➢ **ಬೆಸ್ಕಾಂ ಇಲಾಖೆಗೆ ಸಂಬಂಧಿಸಿರುವುದು**

1. ವಾರ್ಡ್ ವ್ಯಾಪ್ತಿಯಲ್ಲಿ ಕರೆಂಟ್ ಕಂಬದಲ್ಲಿ ವೈರುಗಳು ಸಾಗಿಹೋಗಿ ನೇತ್ತಾಡುತ್ತಿದ್ದು ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಕ್ರಮ ವಹಿಸಲು ಸೂಚಿಸಿದರು.

   ಕ್ರಮ : ಕಿರಿಯ ಅಭಿಯಂತರರು (ಬೆಸ್ಕಾಂ) ರವರು ಈ ಮೇಲೆ ಸೂಚಿಸಿರುವ ಎಲ್ಲಾ ಸಮಸ್ಯಗಳಿಗೆ ಸೂಕ್ತ ಕ್ರಮ ವಹಿಸುತ್ತೇನೆ ಎಂದು ಪ್ರತಿಕ್ರಿಯೆ ನೀಡಿದರು.

➢ **ಸ್ಟ್ರೀಟ್ ಲೈಟ್ ಇಲಾಖೆಗೆ ಸಂಬಂಧಿಸಿರುವುದು**

1. ವಾರ್ಡ್ ವ್ಯಾಪ್ತಿಯಲ್ಲಿನ ಡಿ.ಜೆ.ಹಳ್ಳಿ ಮುಖ್ಯರಸ್ತೆಯ ಸ್ಟ್ರೀಟ್‌ಲೈಟ್‌ಗಳು ಕೆಟ್ಟು ಹೊಗಿದ್ದು ರಿಪೇರಿ ಮಾಡಲು ಸೂಚಿಸಿದರು.

2. ವಾರ್ಡ್ ವ್ಯಾಪ್ತಿಯ ಎಲ್.ಇ.ಡಿ ಲೈಟುಗಳನ್ನು ರಿಪೇರಿ ಮಾಡಲು ಸೂಚಿಸಿದರು ಹಾಗೂ ಬೀದಿ ದೀಪಗಳನಿರ್ವಹಣೆ ಸಮರ್ಪಕವಾಗಿ ನಡೆಯುತ್ತಿಲ್ಲವಾದುದ್ದರಿಂದ ಸಾರ್ವಜನಿಕರು ತುಂಬಾ ಆಕ್ಷೇಪಣೆ ಮಾಡಲಾಗಿ ಸರಿಪಡಿಸುವಂತೆ ಕೊರಲಾಗಿ ಹಾಗೂ ಮುಂದಿನ ಸಭೆಯಲ್ಲಿ ಸದರಿ ವಿಷಯ ಪ್ರಸ್ತಾಪಕ್ಕೆ ಮುನ್ನ ಸರಿಪಡಿಸಲು ತಿಳಿಸಿದರು.

   ಕ್ರಮ : ಸಹಾಯಕ ಅಭಿಯಂತರರು (ಎಲೆಕ್ಟ್ರಿಕಲ್ ಮೆಯೋಹಾಲ್) ರವರಿಗೆ ಸೂಕ್ತ ಕ್ರಮವಹಿಸಲು ಈ ಸಭೆ ಮುಖಾಂತರ ಸೂಚಿಸಲಾಯಿತು.

➢ **ಭೂಸ್ವಾದೀನ ಇಲಾಖೆಗೆ ಸಂಬಂಧಿಸಿರುವುದು**

1. "ವಾರ್ಡ್ ವ್ಯಾಪ್ತಿಯಲ್ಲಿ ಮುನೀಮಾರಪ್ಪ ಬ್ಲಾಕ್‌ನಲ್ಲಿ ಸರ್ವೆ ನಂ 4 (ಸಿ) ಸಿ.ಟಿ.ಎಸ್. 2209ರಲ್ಲಿರುವ ಸುಮಾರು 4318.63 ಚ.ಮಿ ಜಾಗವನ್ನು ಟಿ.ಡಿ.ಆರ್/ಡಿಆರ್.ಸಿ ಪಡೆದು ನಗರ ಪಾಲಿಕೆ ವಶಕ್ಕೆ ನೀಡಲು ಸ್ವತ್ತಿನ ಮಾಲಿಕರಾದ ಶ್ರೀಮತಿ ಜಯಮ್ಮ w/o ಲೇಟ್ ಪಟಾಲಯ್ಯ ರವರು ಒಪ್ಪಿರುವುದರಿಂದ ಈಗಾಗಲೇ ಬಿ.ಬಿ.ಎಂ.ಪಿ ವತಿಯಿಂದ Form I,II ಮತ್ತು ಬಿಡಿಎ ವತಿಯಿಂದ Form III ನೋಟಿಫಿಕೇಷನ್ ಆಗಿದ್ದು, ಸ್ವತ್ತಿನ ಮಾಲೀಕರಿಗೆ ಟಿ.ಡಿ.ಆರ್/ಡಿಆರ್.ಸಿ ನೀಡಿ ಸ್ವತ್ತಿಗೆ ಸಂಬಂಧಿಸಿದಂತೆ Relinquish Deed ಮಾಡಿಕೊಳ್ಳಲು ಮಾನ್ಯ ಉಪ ಆಯುಕ್ತರು (ಭೂಸ್ವಾದಿನ) ರವರಿಗೆ ಪೂಜ್ಯ ಮಹಾಪೌರರು ದಿನಾಂಕ 10-08-2020 ರಂದು ನಡೆದ ಪಾಲಿಕೆ ನಡುವಳಿಯಲ್ಲಿ ಸದರಿ ಜಾಗದಲ್ಲಿ ನಗರ ಪಾಲಿಕೆ ವತಿಯಿಂದ ಉದ್ಯಾನವನ ನಿರ್ಮಿಸಲು ಮಾನ್ಯ ಆಯುಕ್ತರವರಿಗೆ ಅಗತ್ಯ ಕ್ರಮ ವಹಿಸಲು ಪೂಜ್ಯ ಮಹಾಪೌರರು ಸೂಚಿಸಿರುತ್ತಾರೆ." ಇದರ ಪ್ರತಿಯನ್ನು ದೂರಿನಲ್ಲಿ ಸಲ್ಲಿಸಿರುತ್ತಾರೆ.

Scanned with CamScanner

ಈ ವಿಷಯದ ಬಗ್ಗೆ ವಾರ್ಡ್ ಸಭೆಯಲ್ಲಿ ಚರ್ಚಿಸಿ ಈ ಪ್ರದೇಶದಲ್ಲಿ ಯಾವುದೇ ಉದ್ಯಾನವನ ಇರುವುದಿಲ್ಲ ಹಾಗೂ ಸ್ಥಳಿಯ ನಿವಾಸಿಗಳು ಪರಿಶಿಷ್ಟ ಜಾತಿ/ ಪಂಗಡಕ್ಕೆ ಸೇರಿರುವ ಜನಾಂಗವಾಗಿದ್ದು, ಬಿ.ಬಿ.ಎಂಪಿಗೆ ಉದ್ಯಾನವನದ ಅವಶ್ಯಕತೆ ತುಂಬಾ ಇರುವುದರಿಂದ ಸ್ಥಳಿಯ ನಿವಾಸಿಗಳಾದ ಶ್ರೀಮತಿ ಜಯಮ್ಮ w/o ಲೇಟ್ ಪಟಾಲಯ್ಯ ರವರು ಜಾಗವನ್ನು ನೀಡಲು ಸಹೃದಯದಿಂದ ಮುಂದೆ ಬಂದಿದ್ದು ಕೂಡಲೇ ಉದ್ಯಾನವನ ನಿರ್ಮಿಸಲು ಮುಂದಾಗಬೇಕಾಗಿ ಸ್ಥಳಿಯ ನಿವಾಸಿಗಳು ಸಭೆಯಲ್ಲಿ ಕೇಳಿಕೊಂಡಿರುತ್ತಾರೆ. ಸದರಿ ವಿಷಯದ ಬಗ್ಗೆ ಸಮಾಲೋಚಿಸಿ ಸಂಬಂದಪಟ್ಟ ಅಧಿಕಾರಿಗಳಿಗೆ ಪತ್ರ ಬರೆಯಲು ಕಮಿಟಿ ಅಧ್ಯಕ್ಷರು ಈ ಸಭೆ ಮುಖಾಂತರ ಕೋರಿರುತ್ತಾರೆ.

ಕ್ರಮ : ಉಪ ಆಯುಕ್ತರು (ಭೂಸ್ವಾದಿನ/ಟಿಡಿಆರ್)ಇದರ ಬಗ್ಗೆ ಪೂಜ್ಯ ಮಹಾಪೌರರ ಆದೇಶದಂತೆ ಸೂಕ್ತ ಕ್ರಮ ವಹಿಸಲು ಪ್ರತಿಯೊಂದಿಗೆ ಲಗ್ಗತ್ತಿಸಿ ಸಲ್ಲಿಸಿದೆ.

**<u>ಸೂಚನೆ :</u> ಮುಂದಿನ ವಾರ್ಡ್ ಸಮಿತಿ ಸಭೆಗಳನ್ನು ಪ್ರತಿ 1ನೇ ಮತ್ತು 3ನೇ ವಾರದಲ್ಲಿನ ಗುರುವಾರದಂದು ನಡೆಸಲಾಗುವುದು.**

ಈ ಎಲ್ಲಾ ವಿಷಯಗಳ ಬಗ್ಗೆ ತುರ್ತಾಗಿ ಕ್ರಮ ಕೈಗೊಳ್ಳಲು ಸಂಬಂದಪಟ್ಟವರಿಗೆ ಸೂಚಿಸುತ್ತಾ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದೆ.

ನೋಡಲ್ ಅಧಿಕಾರಿ ವಾರ್ಡ್ –48

ಸದಸ್ಯ ಕಾರ್ಯದರ್ಶಿ –48

ಪ್ರತಿಗಳನ್ನು:

1. ಮಾನ್ಯ ಆಡಳಿತಾಧಿಕಾರಿ, ಬಿ.ಬಿ.ಎಂ.ಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ವಲಯ ಆಯುಕ್ತರು ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ಉಪ ಆಯುಕ್ತರು (ಭೂಸ್ವಾದಿನ/ಟಿ.ಡಿ.ಆರ್) ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಮಾನ್ಯ ಜಂಟಿ ಆಯುಕ್ತರು (ಪೂರ್ವ) ರವರ ಮಾಹಿತಿಗಾಗಿ ಸಲ್ಲಿಸಿದೆ
5. ಮುಖ್ಯ ಅಭಿಯಂತರರು (ಪೂರ್ವ) ರವರ ಮಾಹಿತಿಗಾಗಿ ಸಲ್ಲಿಸಿದೆ.
6. ಕಾರ್ಯಪಾಲಕ ಅಭಿಯಂತರರು, ಪುಲಿಕೇಶಿನಗರ ರವರ ಮಾಹಿತಿಗಾಗಿ ಸಲ್ಲಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆ.ಜಿ.ಹಳ್ಳಿ ಉಪ–ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನ ತ್ಯಾಜ್ಯ) ಪುಲಕೇಶಿನಗರ ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
9. ಸಹಾಯಕ ಕಂದಾಯ ಅಧಿಕಾರಿ (ಕೆ.ಜಿ. ಹಳ್ಳಿ) ಉಪವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ನೇತಾಜಿ ರಸ್ತೆ, ರವರ ಮಾಹಿತಿಗಾಗಿ ಸಲ್ಲಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ) ರವರ ಮಾಹಿತಿಗಾಗಿ ಸಲ್ಲಿಸಿದೆ.
12. ಸಹಾಯಕ ಕಾರ್ಯಪಾಲಕ ಅಭಿಯಂತರರು (ಸ್ಟ್ರಿಟ್ ಲೈಟ್) ರವರ ಮಾಹಿತಿಗಾಗಿ ಸಲ್ಲಿಸಿದೆ.
13. ಕಛೇರಿ ಪ್ರತಿ.

Scanned with CamScanner